ರವರಿಗೆ ದಿನಾಂಕ:27–3–2008 ರಂದು ಎಲ್.ಓ.ಐ. ನೀಡಲಾಗಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರು ಹಲವಾರು ಷರತ್ತುಗಳನ್ನು ಮುಂದಿಟ್ಟ ಕಾರಣ ಕ.ವಿ.ಪ್ರ.ನಿ.ನಿ.ಯು ಸದರಿ ಗುತ್ತಿಗೆಯನ್ನು ದಿನಾಂಕ:22–12–2011 ರಂದು ರದ್ದುಗೊಳಿಸಿರುತ್ತದೆ.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣಗಳು ಇದ್ದುದರಿಂದ ವಿಳಂಬವಾಗಿರುತ್ತದೆ.

ಈ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ:24–5–2014 ರಂದು ಹೊಸದಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ, ಅರ್ಹ ಗುತ್ತಿಗೆದಾರರಿಗೆ ಎಲ್.ಓ.ಎ. ನೀಡಿದ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತದೆ.

ಜಾಲಮಂಗಲ ಕಾಲೇಜು ಕಟ್ಟಡದ ಬಗ್ಗೆ

640(726); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಜಾಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದ ಕಾಮಗಾರಿಗಳು ಬಾಕಿ ಉಳಿದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳಿಗೆ ಅನುಮೋದನೆಯನ್ನು ನೀಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಇ) ಗುತ್ತಿಗೆದಾರರಿಗೆ ಬಾಕಿಯನ್ನು ಪಾವತಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ, ಜಾಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿದೆ.

ಆ) ರಾಮನಗರ ತಾಲ್ಲೂಕು, ಕೂಟಗಲ್ ಹೋಬಳಿ ಜಾಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ಕಾಮಗಾರಿಯಲ್ಲಿನ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳನ್ನೊಳಗೊಂಡ ಪರಿಷ್ಕೃತ ಅಂದಾಜು ಪ್ರಸ್ತಾವನೆಯನ್ನು ಶಿಕ್ಷಣ ಇಲಾಖೆಗೆ ಮುಖ್ಯ ಇಂಜಿನಿಯರ್ ಸಂ&ಕ(ದಕ್ಷಿಣ) ಬೆಂಗಳೂರು ರವರು ದಿನಾಂಕ:07.04.2014ರ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಕಾಮಗಾರಿಯ ರೂ. 176.00 ಲಕ್ಷಗಳ ಪರಿಷ್ಕೃತ ಮೊತ್ತಕ್ಕೆ ಅನುಮೋದನೆ ಹಾಗೂ ರೂ. 76.00 ಲಕ್ಷಗಳ ಹೆಚ್ಚುವರಿ ಮೊತ್ತಕ್ಕೆ ಅನುದಾನ ನೀಡುವಂತೆ ಶಿಕ್ಷಣ ಇಲಾಖೆಯನ್ನು ಮತ್ತೊಮ್ಮೆ ಕೋರಲಾಗಿದೆ.

ಇ) ಶಿಕ್ಷಣ ಇಲಾಖೆಯಿಂದ ಸೂಕ್ತ ಅನುದಾನದೊಂದಿಗೆ ಅನುಮೋದನೆ ದೊರೆತ ಕೂಡಲೇ ಗುತ್ತಿಗೆದಾರರಿಗೆ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು

642(748); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ರಾಜ್ಯ ಅಪೆಕ್ಸ್ ಬ್ಯಾಂಕ್‌ನಲ್ಲಿ ಎಲ್ಲಾ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನವರು ಇಟ್ಟಿರುವ ಶೇರು ಹಣವೆಷ್ಟು? ವಿವಿಧ ಠೇವಣಿ ಹಣವೆಷ್ಟು? (ಬ್ಯಾಂಕುವಾರು ವಿವರ ನೀಡುವುದು).

ಆ) ರಾಜ್ಯ ಅಪೆಕ್ಸ್ ಬ್ಯಾಂಕ್ ವಿವಿಧ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಕೊಟ್ಟಿರುವ ವಿವಿಧ ಸಾಲ 31.03.2014ಕ್ಕೆ ಎಷ್ಟೆಷ್ಟು?